**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು–560 001**

**ಸಂಖ್ಯೆಎಂಸಿ4ಮಸಂಶಾಘೋ12/2008–09** **ದಿನಾಂಕ16/11/09**

**ಜ್ಞಾಪನಾ**

ವಿಷಯ:–ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ:–1) ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ4ಎಸ್ಎಂಸಿ 2005 ದಿನಾಂಕ11/09/2007 ಹಾಗೂ ತಿದ್ದುಪಡಿ ದಿನಾಂಕ23/10/2007.

2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ5ಎಸ್ಎಂಸಿ2002 ದಿನಾಂಕ20/7/2004

3) ಸರ್ಕಾರದ ತಿದ್ದೋಲೆಸಂಖ್ಯೆಇಡಿ22ಎಂಪಿಎಸ್ 2005 ದಿನಾಂಕ12/12/2006

4) ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳು

---000---

**ಪ್ರಸ್ತಾವನೆ :–**

ಮೇಲಿನ ಉಲ್ಲೇಖ(1)ರಿಂದ(3)ರವರೆಗಿನ ಸರ್ಕಾರಿ ಅಧಿಸೂಚನೆಗಳಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ16/11/2009ರಂದು ಪರಿಶೀಲನಾ ಸಮಿತಿ ಸಭೆ ಸೇರಿ ಕೆಳಕಂಡ ಶಿಕ್ಷಣ ಸಂಸ್ಥೆಗಳ ದಾಖಲೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕೆಳಕಂಡ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಕೆಲವೊಂದು ಷರತ್ತುಗಳನ್ನು ಅನ್ವಯಿಸಿ, ಸದರಿ ಷರತ್ತುಗಳನ್ನು ಪೂರೈಸಿರುವಂತಹ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸಲು ಸಮಿತಿಯು ತೀರ್ಮಾನಿಸಿತು.

**ಆದೇಶ :–**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಶಾಲೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ. ಕಾಲಾನುಕಾಲಕ್ಕೆ ಮಾನ್ಯತೆಯನ್ನು ನವೀಕರಿಸುವ ಸಮಯದಲ್ಲಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಘೋಷಣೆ ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂತೆಗೆದುಕೊಳ್ಳಲಾಗುವುದು.

| ಕ್ರಮ ಸಂಖ್ಯೆ | ಶಿಕ್ಷಣ ಸಂಸ್ಥೆಯ ಹೆಸರು | ಧರ್ಮ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | **ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು–575002.** | **ಕ್ರಿಶ್ಚಿಯನ್** | **ಸ್ಟೆಲ್ಲಾ ಮೇರಿಸ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, 23 ಗಾಯತ್ರಿದೇವಿ ಬಡಾವಣೆ, ವೈಯಾಲಿಕಾವಲ್, ಬೆಂಗಳೂರು–560003** |
| 2 | **ಸೇಂಟ್ ಥಾಮಸ್ ಎಜುಕೇಶನ್ ಸೊಸೈಟಿ, ಕಾರ್ಮಲ್ ಭವನ್, ಎನ್.ಆರ್. ಮೊಹಲ್ಲಾ, ಮೈಸೂರು–570007.** | **ಕ್ರಿಶ್ಚಿಯನ್** | **ಭಾರತ ಮಾತಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, ಕೊಪ್ಪ, ಪಿರಿಯಾಪಟ್ಟಣ ತಾ.. ಮೈಸೂರು ಜಿಲ್ಲೆ** |
| 3 | **ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಎಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು–575002.** | **ಕ್ರಿಶ್ಚಿಯನ್** | **ಆಶೀರ್ವಾದ ಪ್ರೌಢಶಾಲೆ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ–571426** |

| | | | |
|---|---|---|---|
| 4 | ಮೈಸೂರು ಡಯಾಸಿಸನ್ ಎಜುಕೇಶನಲ್ ಸೊಸೈಟಿ, ಸೇಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಮೈಸೂರು–12 | ಕ್ರಿಶ್ಚಿಯನ್ | ಸೇಂಟ್ ಚಾರ್ಲ್ಸ್ ಗ್ರಾಮಾಂತರ ಪ್ರೌಢಶಾಲೆ, ಒಟ್ಟರದೊಡ್ಡಿ, ಹನೂರು ವಲಯ, ಕೊಳ್ಳೆಗಾಲ ತಾ.. |
| 5 | ಮೈಸೂರು ಡಯಾಸಿಸನ್ ಎಜುಕೇಶನಲ್ ಸೊಸೈಟಿ, ಸೇಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಮೈಸೂರು–12 | ಕ್ರಿಶ್ಚಿಯನ್ | ಸೇಂಟ್ ಮೇರಿಸ್ ತಮಿಳು ಹಿರಿಯ ಪ್ರಾಥಮಿಕ ಶಾಲೆ, ಒಟ್ಟರದೊಡ್ಡಿ, ಹನೂರು ವಲಯ, ಕೊಳ್ಳೆಗಾಲ ತಾ.. |
| 6 | ರಾಯಲ್ ವಿದ್ಯಾ ಸಂಸ್ಥೆ, ನಂ.1574, ಮುಸ್ಲಿಂ ಬ್ಲಾಕ್, ಹುಣಸೂರು, ಮೈಸೂರು ಜಿಲ್ಲೆ | ಮುಸ್ಲಿಂ | ರಾಯಲ್ ನರ್ಸರಿ ಮತ್ತು ಪ್ರಾಥಮಿಕ ಶಾಲೆ, ನಂ.1574, ಮುಸ್ಲಿಂ ಬ್ಲಾಕ್, ಹುಣಸೂರು, ಮೈಸೂರು ಜಿಲ್ಲೆ |
| 7 | ಸೊಸೈಟಿ ಆಫ್ ಅರ್ಸುಲೈನ್ ಸಿಸ್ಟರ್ಸ್ ಆಫ್ ಸೊಮಾಸ್ಕಾ, ಎನ್.ಆರ್.ಮೊಹಲ್ಲಾ, ಮೈಸೂರು–570007 | ಕ್ರಿಶ್ಚಿಯನ್ | ವಿದ್ಯಾ ಜ್ಯೋತಿ ಪ್ರೌಢಶಾಲೆ, ನಾಡನ ಹಳ್ಳಿ, ಬನ್ನೂರು ರಸ್ತೆ, ಮೈಸೂರು |

**ಷರತ್ತುಗಳು**

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೊಂದಣಿ ಕಾಯ್ದೆ ಪ್ರಕಾರ ನೊಂದಣಿಯಾಗಿರಬೇಕು. ಹಾಗೂ ಕಾಲಕಾಲಕ್ಕೆ ನವೀಕರಿಸಿರಬೇಕು.
2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಮತೀಯ ಅಲ್ಪಸಂಖ್ಯಾತರ ಸಂಖ್ಯೆ ಕನಿಷ್ಟ ಮೂರನೆ ಎರಡರಷ್ಟಿರಬೇಕು.
3) ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.
4) ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೊಂದಾಯಿಸಿರಬೇಕು, ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು. ಹಾಗೂ ಇತ್ತೀಚಿನ ಮಾನ್ಯತೆ ನವೀಕರಣ ಪತ್ರ ಹೊಂದಿರತಕ್ಕದ್ದು.
5) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ, ಆಯಾಯ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಟ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.
5) ಶಾಲೆಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯು ಆಯಾ ಮತೀಯ ಅಲ್ಪಸಂಖ್ಯಾತ(ಕ್ರಿಶ್ಚಿಯನ್, ಮುಸ್ಲಿಂ,ಜೈನ,ಬೌದ್ಧ, ಸಿಖ್) ರೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಗಳನ್ನು
1) ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–01 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ನಿರ್ದೇಶಕರು, ಪ್ರೌಢಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣ ಸಾ.ಶಿ.ಇ. ಆಯುಕ್ತರ ಕಛೇರಿ, ಬೆಂಗಳೂರು–01 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ
3) ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು ನಗರ ಉತ್ತರ, ಮೈಸೂರು, ಚಾಮರಾಜನಗರ, ಮಂಡ್ಯ, ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ಉತ್ತರ ವಲಯ–2, ಕೆ.ಆರ್.ಪೇಟೆ, ಹನೂರು ವಲಯ ಕೊಳ್ಳೆಗಾಲ ತಾ.., [illegible] ಇವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.